ಸಾಹಿತ್ಯ ವಿದ್ಯಾರ್ಥಿಗಳು, ಅಧ್ಯಾಪಕರು, ವಿದ್ವಾಂಸರು, 'ಸರಸ ಸೌಗಂಧಿಕ ಪರಿಮಳ' ಎಂಬ ಕುಮಾರವ್ಯಾಸ ಭಾರತ ಸಂಗ್ರಹವನ್ನು ಓದಿದಾಗ ಕಾವ್ಯದ ಭಾಷೆ ಆದರ ತಾತ್ವಿಕತೆ ಮತ್ತು ಸಮಕಾಲೀನ ಬದುಕಿಗೆ ಬೇಕಾದ ಮೌಲ್ಯಗಳನ್ನು ಕಂಡುಕೊಳ್ಳಬಹುದು.

ಜಾತಿ ಪದ್ಧತಿಗಳನ್ನು ಯಾವ ಚರ್ಚೆಯೂ ಇಲ್ಲದೆ ಕುಮಾರವ್ಯಾಸ ಒಪ್ಪಿಕೊಳ್ಳುತ್ತಾನೆ. ಅದನ್ನು ಸಂಗ್ರಹದಲ್ಲಿ ಕೈಬಿಡಲಾಗಿದೆ. ಹದಿನೈದು ಮತ್ತು ಹದಿನಾರನೇ ಶತಮಾನದಲ್ಲಿ ಬಂದ ಭಕ್ತಿ ಸಾಹಿತ್ಯದಲ್ಲಿ ವರ್ಣಾಶ್ರಮ ಧರ್ಮ ಮತ್ತು ಜಾತಿಯನ್ನು ಖಂಡಿಸುವ ವಿವರಗಳಿವೆ. ಭಕ್ತಿ ಕವಿಯಾದ ಕುಮಾರವ್ಯಾಸನಲ್ಲಿ ಚರ್ಚೆ ಮಾಡದೆ ಒಪ್ಪಿಕೊಂಡಿರುವುದು ಚರ್ಚಿಸಬೇಕಾದ ವಿಚಾರ.

ದ್ರೌಪದಿಯ ಪಾತ್ರ ಚಿತ್ರಣ ಮಹಾಭಾರತದಲ್ಲಿ ತುಂಬಾ ಮಹತ್ವದ್ದು. ಜಗತ್ತಿನ ಸಾಹಿತ್ಯದಲ್ಲಿ ಇಂತಹ ಹೆಣ್ಣಿನ ಪಾತ್ರ ಇಲ್ಲ. ಆಕೆಯ ಧೈರ್ಯ, ತಿಳಿವಳಿಕೆ, ತರ್ಕ, ಸೂಕ್ಷ್ಮತೆ ಸಹಜವಾಗಿಯೇ ಚಿತ್ರಿತವಾಗಿದೆ. ಗಂಡಸರನ್ನು ಆಕೆ ಸೂಕ್ಷ್ಮವಾದ ಮಾತುಕತೆಗಳಲ್ಲಿ ಸೋಲಿಸುತ್ತಾಳೆ. ರಾಜಕೀಯ, ನ್ಯಾಯ, ಧರ್ಮ, ಹೆಣ್ಣಿನ ಸ್ಥಾನಮಾನ ಇತ್ಯಾದಿಗಳ ವಿಚಾರಗಳ ಬಗ್ಗೆ ವಾದ ವಿವಾದ ಮಾಡುತ್ತಾಳೆ. ಧರ್ಮರಾಯ ಜೂಜಿನಲ್ಲಿ ಸೋತಾಗ, "ಮೊದಲು ನನ್ನನ್ನು ಸೋತನೋ ಅಥವಾ ತನ್ನನ್ನು ಸೋತ ಮೇಲೋ, ತನ್ನನ್ನು ಸೋತ ಮೇಲೆ ನನ್ನನ್ನು ಸೋಲುವುದಕ್ಕೆ ಅವನಿಗೆ ಅಧಿಕಾರವಿದೆಯೇ? ಲಲಿತ ಬುದ್ಧಿಗಳೀಗ ನೋಡಿ, ನನ್ನ ಪ್ರಶ್ನೆಗೆ ಉತ್ತರ ಕೊಟ್ಟು ಏನು ಮಾಡುವುದು ಮಾಡಿ" ಎಂದು ಕೇಳುವುದರಲ್ಲಿ ತಾರ್ಕಿಕತೆ ಇದೆ. "ಹಿರಿಯರಿಲ್ಲದ ಸಭೆ ಮನುಷ್ಯರ/ನೆರವಿಯದು ಸಭೆಯಲ್ಲ ಮೂರ್ಖರು/ಹಿರಿಯರಲ್ಲ ಯಥಾರ್ಥ ಭಾಷಣಭೀತ ಚೇತನರು". 'ಸ್ತ್ರೀಮತವನ್ನುತ್ತರಿಸಲಾಗದೆ', 'ಪತಿಗಳೆನ್ನನು ಮಾರಿ ಧರ್ಮ ಸ್ಥಿತಿಯ ಕೊಂಡರು', 'ಅತಿರಥಮಹಾರಥರು ಪರಹಿತವ ಬಿಸುಟರು ವ್ಯರ್ಥಭೀತಿಯಲಿ', 'ಗಂಡರೈವರು ಮೂರು ಲೋಕದ ಗಂಡರೊಬ್ಬಳನಾಳಲಾರಿರಿ', 'ಗಂಡರೋ ನೀವು ಭಂಡರೋ', 'ಇನ್ನೂ ಹುಟ್ಟದೆ ಇರಲಿ ನಾರಿಯರೆನ್ನವೊಲು', 'ಭಂಗಿತರು ಭುವನದೊಳಿನ್ನು ಜನಿಸಲು ಬೇಡ' – ಇಂತಹ ಮಾತುಗಳಲ್ಲಿ ಆಕೆಯ ತರ್ಕ ಬದ್ಧತೆ, ಆತ್ಮ ಗೌರವ, ಛಲ, ಹೆಣ್ಣಾಗಿ ಹುಟ್ಟಿದ್ದಕ್ಕೆ ಅಸಹಾಯಕತೆ, ನೆರವಾಗದ ಗಂಡಂದಿರನ್ನು ಪಡೆದಿದ್ದಕ್ಕೆ ಆಕ್ರೋಶ, ಹತಾಶೆ, ನಿರಾಸೆ, ಎಲ್ಲವೂ ವ್ಯಕ್ತವಾಗಿವೆ. ಸ್ತ್ರೀವಾದದ ಬೇರೆಬೇರೆ ಆಯಾಮಗಳಲ್ಲಿ ದ್ರೌಪದಿಯ ಈ ಪಾತ್ರವನ್ನು ವಿಶ್ಲೇಷಿಸಿದರೆ ಹಲವಾರು ಒಳನೋಟಗಳು ದೊರೆಯುತ್ತವೆ. ಇಂತಹ ಸಂದರ್ಭದಲ್ಲಿ ಕೃಷ್ಣಮೂರ್ತಿ ಹನೂರರು ಎಚ್ಚರಿಕೆಯಿಂದ ಕಥನದ ಓಟಕ್ಕೆ ಭಂಗ ಬರದಂತೆ ಕಾವ್ಯದ ಭಾಗಗಳನ್ನು ಆಯ್ಕೆ ಮಾಡಿದ್ದಾರೆ.

ಕುಮಾರವ್ಯಾಸ ತನ್ನ ಕಾವ್ಯವನ್ನು 'ಕೃಷ್ಣಕಥೆ' ಎಂದು ಕರೆದಿದ್ದಾನೆ. ಅವನ ಪಾರಮ್ಯವನ್ನು ಆತನ ಬಗ್ಗೆ ಪ್ರೀತಿ, ಶ್ರದ್ಧೆ ಹಾಗೂ ಸಮರ್ಪಣಾಭಾವವನ್ನು ಎಲ್ಲ ಪಾತ್ರಗಳು ಬೆಳೆಸಿಕೊಳ್ಳುತ್ತವೆ. ಭೀಮನನ್ನು ಹೊರತುಪಡಿಸಿ ಎಲ್ಲರೂ ಅವನ ಅಧೀನತೆಯನ್ನು ಒಪ್ಪಿಕೊಳ್ಳುತ್ತಾರೆ. ದ್ರೌಪದಿಗಂತು ಅವನು ದೈವ ಮತ್ತು ಬಂಧು. ಅರ್ಜುನನಿಗೆ ಪ್ರಾಣ ಸಖ. ದುರ್ಯೋಧನನು ಕೂಡ ಕೃಷ್ಣನ ದೈವತ್ವವನ್ನು ಒಪ್ಪಿ ಆ ದೈವದ ವಿರುದ್ಧವೇ ನಿಲ್ಲುತ್ತಾನೆ. ಕೊನೆಗೆ ಅದನ್ನು ವಿಧಿ ಎಂದು ಪರಿಗಣಿಸುತ್ತಾನೆ. 'ಕೃಷ್ಣನ ಕೆಣಕಿದಲ್ಲದೆ ಕೈವಲ್ಯವಿಲ್ಲ' ಎಂಬ ಮನೋಭಾವ ತಾಳುತ್ತಾನೆ. ಕೃಷ್ಣನ ವ್ಯಕ್ತಿತ್ವವೇ ಅಂತಹದು.